ಹಿಂದೆ ತುಂಬಾ ಅನುಕೂಲಸ್ಥರು, ತಾತ ಮುತ್ತಾತನ ಕಾಲದಿಂದ ಊರಿನ ಪಟೇಲಿಕೆ ಇತ್ತು ಅವ್ರಿಗೆ. ಇಬ್ರು ಗಂಡು, ನಾಕು ಹೆಣ್ಣು, ಅಲ್ಲಿ ಗೋಕುಲ ಬಡಾವಣೆ ಇದ್ಯಲ್ಲ, ಅದೆಲ್ಲಾ, ಪೂರ್ತಿ ಅವರ ಅಣ್ಣತಮ್ಮರ ಜಮೀನೆ... ನಾವು ಚಿಕ್ಕದ್ರಲ್ಲಿ ನಾಗರಪಂಚಮೀಲಿ ಹೋಗಿ ಅವರ ನಾಗರಕಟ್ಟೆಗೆ ಹಾಲು ಬಿಟ್ಟು ಬರ್ತಿದ್ವಿ ಗೀತಾ... ಹಂಗೆ ಅವರ ಮನೆಗೋಗಿ ಚಿಗಳಿ ತಂಬಿಟ್ಟು ಕೊಟ್ಟು, ಅವರ ಮನೆ ಬಿಸಿ ಬಿಸಿ ಹುಗಿ ಅನ್ನ, ಕಾಯ್ ಹಾಲು ಉಂಡು ಬರತಿದ್ವಿ. ಮಳೆಗಾಲದಲ್ಲಿ ಹೊಲದ ನಡುಮಧ್ಯೆ ನಡಕಂಡು ಹೋಗ್ತಿದ್ರೆ ಉಂಗ ನೆಂದು ತಣ್ಣಗಾಗಿರೋದು. ಅವರೂರಲ್ಲಿ, ಏನು ವ್ಯವಸಾಯ ಮಾಡವ್ರು ಅಂತೀರಾ... ನಮ್ಮ ಸುತ್ತುಮುತ್ತಕ್ಕೆ ಅವರಂಗೆ ರಾಗಿ ಬೆಳದು ಪತ್ತಾಸಿಗೆ ದುಡ್ಡು ತುಂಬತಿದ್ದೋರು ಯಾರೂ ಇರ್ನಿಲ್ಲಪ್ಪಾ... ಈಗಲೂ ಅದಕ್ಕೆ ಹಂಗೆ ಗಟ್ಟಿಮುಟ್ಟಾಗಿದ್ದಾರೆ ನೋಡಿ, ನಮ್ಮಪ್ಪಾರ ವಯಸ್ಸೇ ಅವರಿಗೂ, ಈಗ್ಲೂ ಸೈಕಲ್ ಹೊಡ್ಕಂಬರ್ತಾರೆ.'

ಹುಬ್ಬೇರಿಸಿ ಹೇಳಿದ ಪದ್ಮಾಳ ಮಾತುಗಳನ್ನು ಗೀತಾ ತನಗೆ ಗೊತ್ತಿರದ ಬೇರೆ ನಾಡಿನ ಕಥೆಯೊಂದನ್ನ ಕಣ್ಣು ಬಾಯಿ ಬಿಟ್ಟು ಕೇಳಿಸಿಕೊಳ್ಳುತ್ತಿದ್ದಳು. 'ಆವತ್ತಿನ ಕಾಲದಿಂದ ಮನೆಮುಂದಲೆ ಕೇಂದ್ರೀಯ ವಿದ್ಯಾಲಯ ಇಟ್ಕಂಡಿದ್ರೂ ಅವರ ಗಂಡುಮಕ್ಕಳು ಓದನಿಲ್ಲ. ಜಮೀನು ಸರ್ಕಾರ ಮುಟ್ಟು ಹಾಕ್ಕಂಡಿದ್ದೆ ತಗೋ ವ್ಯವಸಾಯ ನಿಂತು ಹೋಯ್ತು. ಅವರೂ ನಮ್ಮಂಗೇ... ಹೆಂಗೋ ಒಂದು ಮೂರೆಕರೆ ಜಮೀನ, ಕಾಲುವೆ ಇರೋ ಕಡೆಗೆ ಬಿಡಿಸಿಕೊಂಡು, ನೇಪಿಯರ್ ಹುಲ್ಲು ಬೆಳೆಸಿ ಡೈರಿ ಮಾಡುದ್ರು, ಆ ಕಾಲಕ್ಕೇನೆ! ಸಣ್ಣ ದನ, ಎಮ್ಮೆಗಳನ್ನ ಬಿಟ್ರೆ ನಮ್ಮ ಕಡೆ ಜನ ಸೀಮೆಹಸುಗಳ ನೋಡಿದ್ದೇ ಅವರ ಮನೇಲಿ ಮೊದ್ಲು ಅಂತಾರೆ ನಮ್ಮಣ್ಣನೋರು. ಆಗಿನ ಕಾಲಕ್ಕೆ ನಮ್ಮ ರೈತರ ಮನೇಲಿ ಯಾರೂ ಇವನ್ನ ಸಾಕ್ತಿರ್ಲಿಲ್ಲ... ಏನು? ಒಳ್ಳೆ ಆನೆ ಹಂಗೆ ಕಾಣವು ನಮ್ಮ ಕಣ್ಣಿಗೆ... ಅವೇನು ಕೆಚ್ಚಲು! ನೆಲಕ್ಕೆ ಬಿದ್ದೋಗಿರವು. ಒಂದೊಂದು ಬಕೆಟ್ ಹಾಲು ಹಿಂಡವು ಒಂದೊಂದೂವೆ.

ಅವನ್ನ ಸಾಕಿದ್ರೆ ಅಂತಿಂಥ ಕೆಲ್ಸ ಅಲ್ಲ ಬಿಡಿ. ಆವತ್ತಿಗೆ ಅಂಥ ಐವತ್ತು ದೊಡ್ಡ ಹಸುಗಳನ್ನ ಸಾಕ್ಕೊಂಡು ಮೂರೆಕರೆ ಸೈಟ್ ಆಗೋಂಥ ಜಮೀನು ಇಟ್ಕಂಡು ದೊಡ್ಡಮನೆ ಕಟ್ಟಿ ಬೇಕಾದಂಗೆ ಸಂಪಾದನೆ ಮಾಡಕಂಡು ಚೆನ್ನಾಗಿದ್ರಪ್ಪ... ಅವ್ರು. ಮಗಳನ್ನ ನಮ್ಮ ಶಿರಾ ಎಂ.ಎಲ್.ಎ. ಮದ್ವೆ ಆಗಿದ್ರು, ಆಗಿನ ಕಾಲಕ್ಕೆ ಹೆಣ್ಣುಮಕ್ಳನ್ನ ಒಳ್ಳೊಳ್ಳೆ ಕಡೆಗೆ ಕೊಟ್ಟಿದಾರೆ ಪಟೇಲಪ್ಪ. ಹೆಣ್ಣುಮಕ್ಳು ಎಷ್ಟು ಚೆನ್ನಾಗಿದ್ರು, ಅನ್ಕಂಬೇಡಿ. ಅವ್ರೆಲ್ಲ ಡಿಗ್ರಿ ಮಾಡಕಂಡಿದ್ರು ಆಗಿನ ಕಾಲಕ್ಕೆ. ನಮ್ಮ ನೆಂಟರುಗಳು ಗವರ್ಮೆಂಟ್ ಕೆಲ್ಸದಲ್ಲಿದ್ದವ್ರು ನಾನು ತಾನು ಅಂತ ಮೇಲುಬಿದ್ದು ಹುಡುಕೊ ಬಂದು ಬಂದಿದ್ದೆ, ಮದ್ವೆ ಮಾಡಕಂಬಿಡವ್ರು.

ವರ ಗಂಡುಮಕ್ಳು ಏನ್ ಮಾಡಿದ್ರು? ನೆಟ್ಟಗೆ ಓದ್ಲಿಲ್ಲ. ದುಡಿಯೋದು ಬಿಟ್ಟುಬಿಟ್ಟು ಮಿಳಟರಿ ಹೋಟ್ಲು, ಬಾರು ಮಾಡಕ್ಕೋದ್ರು. ಬೇಸಾಯದೋರ್ಗೆ ಅನ್ನವ ಹೊಟ್ಟೆ ತುಂಬ ಇಕ್ಕದು ಗೊತ್ತೇ ಹೊರತು ಲೆಕ್ಕಾಚಾರ ಎಲ್ಲಿ ತಿಳಿಬೇಕು? ನೀವೆ ಹೇಳಿ, ಹತ್ತಾರು ವರುಷಕ್ಕೆಲ್ಲ ಇಳಿಮುಖ ಆಗೋಯ್ತು ಮನೆ ಅನ್ನದು. ಅವರಪ್ಪ ಹೋಟ್ಲುಗೆ ಹಾಲು ಹಾಕಿ ದುಡದು ತಂದ ಕಾಸನಾ ಹೆಂಡ ಬುಂಡೆಗೆ ಕಳದು, ಈಗ ಇದ್ದ ಜಮೀನು ಮಾರಾಕಿ ಅವರ ಹೊಟ್ಟೇಲಿ ಹುಟ್ಟದ ಮಕ್ಳನ್ನ ಮದ್ವೆ ಮಾಡಕಂಡ್ರು, ಧಾಂಧೂಮ್ ಅಂತ. ಏನ್ ಮಾಡತೀರ? ಮಕ್ಕಳು ಬುದ್ಧಿವಂತರಾಗಲಿಲ್ಲ ಅಂದ್ರೆ ಪಟೇಲಪ್ಪನ ಪಾಡೆ ಎಲ್ಲರದ್ದು. ನಮಗೆ ಗೊತ್ತಿರೋ ಹಂಗೆ ಬೆಳಿಗ್ಗೆ ಮೂರು ಗಂಟೆಗೆ ಎದ್ದು ಗೇಯ್ಮೆ ಮಾಡೋ ಜೀವ, ಈಗ ನೋಡಿ ಅದೆಲ್ಲ ಹೊಳೇಲಿ ಹುಣಸೆಹಣ್ಣು ತೊಳದಂಗೆ ಆಗೋಗಿ ಇರಕ್ಕೆ ಒಂದ್ ಮನೆ ಬಿಟ್ಟು ಏನೂ ಉಳಿದಿಲ್ಲ. ಒಂದೆರಡು ಹಸು ಇಟ್ಕಂಡು ಹೆಂಗೋ ಮನೆಮನೆಗೆ ಹಾಲು ಹಾಕ್ಕಂತರೆ, ಜೀವನ ಮಾಡಕಂತರೆ.

ತಿರಕೆ ಶೋಕೀಲಿ ಹಾಳಾದ ಮಕ್ಕಳನ್ನ ಮರೆಯಕ್ಕೆ ಪಟೇಲಪ್ಪನೂ ಹಿಂಗೆ ಸಿಳ್ಳೆ ಹೊಡಿತದೆನೋಪ್ಪ! ಏನೂಂದ್ರೆ... ಮನಸ್ಸಿನ ಭಾರ ಸಿಳ್ಳೇ ರಾಗದಲ್ಲಿ ಗಾಳೀಲಿ ತೇಲಿ ಹೋಗುತ್ತೇನೊ ಅಲ್ವಾ? ಗೀತಾ... ಪಾಪ! ಪ್ರತಿ ವರ್ಷ ನಮ್ಮ ದೇವ್ರ ಹಬ್ಬದ ಮರಿ ಊಟಕ್ಕೆ ಅವ್ರು ಬಂದೇ ಬರತಾರೆ, ತಪ್ಸಲ್ಲ, ಪೂಜೆ ಮುಗ್ಸಿ ಊಟ ಮಾಡೋವಾಗ ಕಣ್ಣಿಗೆ ವತ್ಕಂಡೆ ಅನ್ನ ಬಾಯಿಗೆ ಇಟಕಳದು, ಅವ್ರಿಗೆ 'ಶಿಳ್ಳೆ ಪಟೇಲಪ್ಪ' ಅಂತಾನೆ ಅಡ್ಡ ಹೆಸರು. ಒಂದು ತಲೇಲಿ ಏಳು... ಒಂದು ತಲೇಲಿ ಬೀಳು ಅನ್ನೋದು ಸುಳ್ಳಲ್ಲ ಗೀತಾ, 'ದೇವರ ಮೇಲೆ ಹೂ ತಪ್ಪಿದ್ರೂ' ವಾರಕ್ಕೊಂದು ಸಿನಿಮಾ ನೋಡೋದನ್ನ